**All India Radio: Bangalore**
**National Bulletin In Kannada**
**05.08.2025  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**05.08.2025  1.10 p.m.**

**<><><><>**

ಮುಖ್ಯಾಂಶಗಳು :

1. ಪ್ರತಿಪಕ್ಷಗಳ ಗದ್ದಲ ; ಸಂಸತ್ತಿನ ಉಭಯ ಸದನಗಳ ಕಲಾಪ ಅಪರಾಹ್ನ ೨ ಗಂಟೆಗೆ ಮುಂದೂಡಿಕೆ
2. ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ - ಫಿಲಿಫೈನ್ಸ್ ಅಧ್ಯಕ್ಷ ಮಾರ್ಕೋಸ್ ನಡುವೆ ಮಾತುಕತೆ
3. ಇದೇ ಮೊದಲ ಬಾರಿಗೆ ೭೦೦ ದಶಲಕ್ಷ ಗಡಿ ದಾಟಿದ ಯುಪಿಐ ದೈನಂದಿನ ವಹಿವಾಟು
4. ಎನ್‌ಡಿಎ ಸಂಸದೀಯ ಪಕ್ಷದ ಸಭೆ - ಆಪರೇಷನ್ ಸಿಂದೂರ್ ಮತ್ತು ಮಹಾದೇವ್ ಕಾರ್ಯಾಚರಣೆಗಳ ಯಶಸ್ಸಿನ ಕುರಿತ ನಿರ್ಣಯ ಸರ್ವಾನುಮತದಿಂದ ಅಂಗೀಕಾರ

<><><><>

ಬಿಹಾರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಅಭಿಯಾನದ ಕುರಿತು ಚರ್ಚೆಗೆ ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು ನಿರಂತರ ಪ್ರತಿಭಟನೆ ಮುಂದುವರಿಸಿದ ಹಿನ್ನೆಲೆಯಲ್ಲಿ ಸಂಸತ್ತಿನ ಉಭಯ ಸದನಗಳ ಕಲಾಪವನ್ನು ಅಪರಾಹ್ನ ೨ ಗಂಟೆಗೆ ಮುಂದೂಡಲಾಗಿದೆ. ಲೋಕಸಭೆಯಲ್ಲಿ  ಕಲಾಪ ಆರಂಭವಾಗುತ್ತಿದ್ದಂತೆ ಇತ್ತೀಚೆಗೆ ನಿಧನ ಹೊಂದಿದ ಮಾಜಿ ಸಂಸದರಾದ ಶಿಬೂ ಸೊರೇನ್, ತಿಲಕ ಧಾರಿ, ಪ್ರಸಾದ್ ಸಿಂಗ್ ಮತ್ತು ಮಿರ್ಜಾ ಪುರದ ರಾಮರತಿ ಬಿಂಡ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಆನಂತರ ಸಭಾಧ್ಯಕ್ಷ ಓಂ ಬಿರ್ಲಾ ಪ್ರಶ್ನೋತ್ತರ ಕಲಾಪ ಕೈಗೆತ್ತಿಗೊಂಡರು. ಆದರೆ, ಪ್ರತಿಪಕ್ಷಗಳು ಸುಗಮ ಕಲಾಪಕ್ಕೆ ಅವಕಾಶ ಕೊಡಲಿಲ್ಲ. ಪ್ರಶ್ನೆಯೊಂದಕ್ಕೆ ಉತ್ತರಿಸಲು ಪ್ರಯತ್ನಿಸುತ್ತಿದ್ದ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪ್ರತಿಪಕ್ಷಗಳ ನಡುವಳಿಕೆ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ನೇರ ಹಣ ವರ್ಗಾವಣೆ ಡಿಬಿಟಿ ಯೋಜನೆ ಕುರಿತು ಮಾತನಾಡಿದ ಅವರು, ರೈತರ ಹಾಗೂ ಬಡ ಜನರ ಕಲ್ಯಾಣಕ್ಕಾಗಿ ಈ ಯೋಜನೆಯನ್ನು  ವಿನ್ಯಾಸಗೊಳಿಸಲಾಗಿದೆ. ಆದರೆ, ಪ್ರತಿಪಕ್ಷಗಳು ಈ ಯೋಜನೆ ಕುರಿತು ಜನರಿಗೆ ತಿಳಿಸಿಕೊಡಲು ಅವಕಾಶ ನೀಡುತ್ತಿಲ್ಲ ಎಂದು ಹೇಳಿದರು. ಈ ನಡುವೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಎಲ್ಲಾ ಪ್ರತಿಪಕ್ಷ ಸದಸ್ಯರಲ್ಲಿ ಸದನದ ಘನತೆ ಕಾಪಾಡುವಂತೆ ಹಾಗೂ ಕಲಾಪ ಸುಗಮವಾಗಿ ನಡೆಸಲು ಅನುವು ಮಾಡಿಕೊಡುವಂತೆ ಹಲವು ಬಾರಿ ಕೋರಿದರು ಗದ್ದಲ ಮುಂದುವರೆದ ಪರಿಣಾಮ ಸದನವನ್ನು ೨ ಗಂಟೆಯವರೆಗೆ ಮುಂದೂಡಲಾಯಿತು. ಕಳೆದ ತಿಂಗಳ ೨೧ ರಂದು ಮುಂಗಾರು ಅಧಿವೇಶನ ಆರಂಭವಾದಾಗಿನಿಂದ ಕಲಾಪಗಳು ಮುಂದೂಡಿಕೆಗಳಾಗುತ್ತಲೇ ಸಾಗಿದ್ದು, ಶಾಸಕಾಂಗ ಕೆಲಸ ಕಾರ್ಯ ಹೆಚ್ಚು ಮುಂದುವರೆದಿಲ. ರಾಷ್ಟ್ರೀಯ ಕ್ರೀಡಾಡಳಿತ ವಿಧೇಯಕ, ರಾಷ್ಟ್ರೀಯ ಆಂಟಿ ಡೊಪಿಂಗ್ ವಿಧೇಯಕ ಸೇರಿದಂತೆ ಪ್ರಮುಖ ಮಸೂದೆಗಳು ಅನುಮೋದನೆಗೆ ಬಾಕಿ ಇದೆ. ರಾಜ್ಯಸಭೆಯಲ್ಲೂ ಪ್ರತಿಪಕ್ಷಗಳ ಸದಸ್ಯರು ಗದ್ದಲ ಎಬ್ಬಿಸಿದವು. ಉಪಸಭಾಪತಿ ಹರಿವಂಶ್, ಕೆಲ ಸದಸ್ಯರು ಪೂರ್ವ ಯೋಜಿತ ರೀತಿಯಲ್ಲಿ ಪದೇಪದೇ ಸದನದ ಕಾರ್ಯಾಕಲಾಪವನ್ನು ಅಡ್ಡಿಪಡಿಸುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿದರು. ಬಳಿಕ ಕಲಾಪವನ್ನು ೨ ಗಂಟೆಗೆ ಮುಂದೂಡಿದರು.

<><><><>

ಕಳೆದ ೧೧ ವರ್ಷಗಳಲ್ಲಿ ರೈತರ ಆದಾಯ ಹೆಚ್ಚಿಸಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಲೋಕಸಭೆಯಲ್ಲಿಂದು ಪ್ರಶ್ನೋತ್ತರ ಕಲಾಪದ ವೇಳೆ ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಪಿಎಮ್ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿಯಲ್ಲಿ ೪ ಲಕ್ಷ ಕೋಟಿ ರೂಪಾಯಿಯನ್ನು ರೈತರ ಖಾತೆಗಳಿಗೆ ನೇರವಾಗಿ ಜಮ ಮಾಡಲಾಗಿದೆ. ಇದರ ಜೊತೆಗೆ ರೈತರಿಗಾಗಿ ೧೪ ಲಕ್ಷ ಕೋಟಿಗೂ ಅಧಿಕ ರಸಗೊಬ್ಬರ ಸಬ್ಸಿಡಿ ನೀಡಲಾಗಿದೆ ಎಂದು ಹೇಳಿದರು.

<><><>

ನವದೆಹಲಿಯ ಹೈದರಾಬಾದ್ ಭವನದಲ್ಲಿಂದು ಫಿಲಿಫೈನ್ಸ್ ಅಧ್ಯಕ್ಷ ಫರ್ಡಿನಂಡ್ ರೊಮುಯಾಲ್ಡೆಜ್ ಮಾರ್ಕೋಸ್ ಜ್ಯೂನಿಯರ್, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ೫ ದಿನಗಳ ಅಧಿಕೃತ ಭೇಟಿಗಾಗಿ ನಿನ್ನೆ ಭಾರತಕ್ಕೆ ಆಗಮಿಸಿರುವ ಫಿಲಿಫೈನ್ಸ್ ಅಧ್ಯಕ್ಷ ಫರ್ಡಿನೆಂಡ್ ಮಾರ್ಕೋಸ್ ಜೂನಿಯರ್ ಅವರಿಗೆ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿಂದು ಸಾಂಪ್ರಾದಾಯಿಕ ಸ್ವಾಗತ ಕೋರಲಾಯಿತು. ಈ ವೇಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತರಿದ್ದರು.

<><><>

ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ ಆಧಾರಿತ ದೈನಂದಿನ ವಹಿವಾಟುಗಳು ಮೊದಲ ಬಾರಿಗೆ ೭೦೦ ದಶಲಕ್ಷ ಗಡಿ ದಾಟಿದ್ದು, ಆಗಸ್ಟ್ ೨ರಂದು ೭೦೭ ದಶಲಕ್ಷ ವಹಿವಾಟುಗಳನ್ನು ನಡೆಸಲಾಗಿದೆ. ಭಾರತೀಯ ರಾಷ್ಟ್ರೀಯ ಪಾವತಿ ನಿಗಮ ಎನ್‌ಪಿಸಿ ಅಂಕಿ ಅಂಶಗಳ ಪ್ರಕಾರ ಆಗಸ್ಟ್ ೨ರ ಒಂದೇ ದಿನ ನಡೆಸಿದ ವಹಿವಾಟುಗಳು ೭೦೦ ದಶಲಕ್ಷ ದಾಟಿದ್ದು ಕಳೆದ ೨ ವರ್ಷಗಳಲ್ಲಿ ಪ್ರತಿದಿನ ನಡೆಯುವ ವಹಿವಾಟುಗಳ ಸಂಖ್ಯೆ ದ್ವಿಗುಣಗೊಂಡಿದೆ. ೨೦೨೩ರ ಆಗಸ್ಟ್ ನಲ್ಲಿ ಯುಪಿಐ ಪ್ರತಿದಿನ ೩೫೦ದಶಲಕ್ಷ ವಹಿವಾಟು ದಾಖಲಿಸುತ್ತಿತ್ತು, ಈ ಸಂಖ್ಯೆ ೨೦೨೪ರ ಆಗಸ್ಟ್ ವೇಳೆಗೆ ೫೦೦ ದಶಲಕ್ಷ ಗಡಿ ದಾಟಿತ್ತು. ಪ್ರತಿದಿನ ಯುಪಿಐ ಮೂಲಕ ೧೦೦ ಕೋಟಿ ವಹಿವಾಟುಗಳನ್ನು ಸಾಧಿಸುವ ಗುರಿಯನ್ನು ಸರ್ಕಾರ ಹೊಂದಿದ್ದು, ಈ ವೇದಿಕೆ ಸರ್ಕಾರದ ಗುರಿಯನ್ನು ಪ್ರಸ್ತುತ ಬೆಳವಣಿಗೆ ದರಗಳ ಅನ್ವಯ ಮುಂದಿನ ವರ್ಷ ಸಾಧಿಸುವುದಾಗಿ ಅಂದಾಜಿಸಲಾಗಿದೆ.

<><><>

ರಾಷ್ಟ್ರೀಯ ಪ್ರಜಾತಂತ್ರ ಮೈತ್ರಿಕೂಟದ - ಎನ್‌ಡಿಎ ಸಂಸದೀಯ ಪಕ್ಷದ ಮಹತ್ವದ ಸಭೆ ನವದೆಹಲಿಯಲ್ಲಿಂದು ನಡೆಯಿತು. ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ಜೆ.ಪಿ.ನಡ್ಡ ಮತ್ತಿತ್ತರ ಎನ್.ಡಿ.ಎ ಸಂಸದರು ಭಾಗವಹಿಸಿದ್ದರು. ಸಭೆಯಲ್ಲಿ ಆಪರೇಷನ್ ಸಿಂದೂರ್ ಮತ್ತು ಆಪರೇಷನ್ ಮಹಾದೇವ್ ಕಾರ್ಯಾಚರಣೆಗಳ ಯಶಸ್ಸಿಗಾಗಿ ಇಂಡಿಯಾ ಸಂಸದರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿ ಸನ್ಮಾನಿಸಿದರು. ಇದೇ ವೇಳೆ ಈ ಕಾರ್ಯಾಚರಣೆಗಳ ಯಶಸ್ಸಿನ ಕುರಿತ ನಿರ್ಣಯವನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

<><><>

ರಾಜ್ಯಾದ್ಯಂತ ನಡೆಯುತ್ತಿರುವ ಸಾರಿಗೆ ನೌಕರರ ಮುಷ್ಕರಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಜಧಾನಿ ಬೆಂಗಳೂರಿನಲ್ಲಿ ಬಸ್‌ಗಳ ಸಂಚಾರ ಎಂದಿನಂತೆ ಸಾಗಿದೆ. ಕೆಎಸ್‌ಆರ್‌ಟಿಸಿ ಶೇಕಡ ೪೦ರಷ್ಟು, ಬಿಎಂಟಿಸಿ ಶೇಕಡ ೯೯ ರಷ್ಟು, ವಾಯವ್ಯ ಸಾರಿಗೆ ಶೇಕಡ ೫೫ ರಷ್ಟು, ಕಲ್ಯಾಣ ಕರ್ನಾಟಕ ಸಾರಿಗೆ ಶೇಕಡ ೨೭.೪ ರಷ್ಟು ಕಾರ್ಯ ನಿರ್ವಹಿಸುತ್ತಿವೆ ಎಂದು ಕರ್ನಾಟಕ ರಾಜ್ಯ ಸಾರಿಗೆ ನಿಗಮ ಸ್ಪಷ್ಟಪಡಿಸಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯ ಕರ್ತವ್ಯ ಪಥದಲ್ಲಿ ನಿರ್ಮಿತ ನೂತನ ಕರ್ತವ್ಯ ಭವನವನ್ನು ನಾಳೆ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಸಾರ್ವಜನಿಕ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಲಿದ್ದಾರೆ. ಕರ್ತವ್ಯ ಭವನ, ಸೆಂಟ್ರಲ್ ವಿಸ್ತಾ ವಿಶಾಲ ಯೋಜನೆಯ ಭಾಗವಾಗಿದ್ದು, ಭವಿಷ್ಯದಲ್ಲಿ ನಿರ್ಮಾಣವಾಗಲಿರುವ ಅನೇಕ ಕೇಂದ್ರೀಯ ಕಟ್ಟಡಗಳಲ್ಲಿ ಮೊದಲನೆಯದಾಗಿದೆ. ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಸುಗಮಗೊಳಿಸಿ, ವೇಗದ ಮತ್ತು ಪರಿಣಾಮಕಾರಿ ಆಡಳಿತವನ್ನು ಸಾಧ್ಯವಾಗಿಸುವುದು ಇದರ ಉದ್ದೇಶವಾಗಿದೆ. ಕರ್ತವ್ಯ ಭವನ ದೆಹಲಿಯ ವಿವಿಧೆಡೆ ವ್ಯಾಪಿಸಿರುವ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳನ್ನು ಒಂದುಗೂಡಿಸುವ ಮೂಲಕ ಕಾರ್ಯಕ್ಷಮತೆ, ನಾವೀನ್ಯತೆ ಮತ್ತು ಸಹಕಾರವನ್ನು ಉತ್ತೇಜಿಸುವಂತೆ ವಿನ್ಯಾಸಗೊಳಿಸಲಾಗಿದೆ ಎಂದು ಪ್ರಧಾನಮಂತ್ರಿಗಳ ಕಚೇರಿ ತಿಳಿಸಿದೆ. ಸುಮಾರು ೧.೫ ಲಕ್ಷ ಚದರ ಮೀಟರ್ ಪ್ರದೇಶದಲ್ಲಿ ನಿರ್ಮಿತವಾಗಿರುವ ಈ ಆಧುನಿಕ ಕಚೇರಿ ಸಂಕೀರ್ಣ ಎರಡು ನೆಲಮಹಡಿ ಮತ್ತು ಏಳು ಮಹಡಿಗಳನ್ನು ಒಳಗೊಂಡಿದೆ.

<><><>

ಬ್ರೆಜಿಲ್ ನ ಮಾಜಿ ಅಧ್ಯಕ್ಷ ಜೈರ್ ಬೋಲ್ಸನಾರೋ ವಿರುದ್ಧದ ಪ್ರಕರಣದಲ್ಲಿ ಬ್ರೆಜಿಲ್ ಸರ್ವೋಚ್ಚ ನ್ಯಾಯಾಲಯ ಮಾಜಿ ಅಧ್ಯಕ್ಷ ಜೈರ್ ಗೃಹಬಂಧನಕ್ಕೆ ಆದೇಶ ಹೊರಡಿಸಿದೆ. ೨೦೨೨ರ ಚುನಾವಣೆಯಲ್ಲಿ ಸೋಲನ್ನು ಅಭವಿಸಿದ ನಂತರವು ಅಧಿಕಾರದಲ್ಲಿ ಉಳಿಯಲು ತಂತ್ರ ರೂಪಿಸಿದ್ದರು ಎಂಬ ಆರೋಪದಡಿ ಅವರು ಈಗಾಗಲೇ ವಿಚಾರಣೆಗೆ ಒಳಗಾಗಿದ್ದರು. ಈ ಪ್ರಕರಣ ಬ್ರೆಜಿಲ್ ನಲ್ಲಿ ಬಾರಿ ಚರ್ಚೆಗೆ ಗ್ರಾಸವಾಗಿದ್ದು ಟ್ರಂಪ್ ಆಡಳಿತದೊಂದಿಗೆ ವ್ಯಾಪಾರ ಸಮರ ಎದುರಿಸುತ್ತಿರುವ ಸಮಯದಲ್ಲಿ ಈ ಬೆಳವಣಿಗೆ ಮಹತ್ವ ಪಡೆದಿದೆ.

<><><>

ಭಾರತ, ೨೦೨೪ರಲ್ಲಿ ೨೧೧ ದಶಲಕ್ಷ ಪ್ರಯಾಣಿಕರನ್ನು ನಿರ್ವಹಿಸಿ, ವಿಶ್ವದ ಐದನೇ ಅತಿದೊಡ್ಡ ವಿಮಾನಯಾನ ಮಾರುಕಟ್ಟೆಯಾಗಿ ಹೊರಹೊಮ್ಮಿದೆ ಎಂದು ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಸಂಸ್ಥೆ - ಐಎಟಿಎ ತನ್ನ ೨೦೨೪ರ ವಿಶ್ವ ವಿಮಾನ ಸಾರಿಗೆ ಅಂಕಿಅಂಶಗಳ ವರದಿಯಲ್ಲಿ ತಿಳಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>